ಪಿ.ಎಸ್. ಶ್ರೀವತ್ಸ, ಬೆಂಗಳೂರು

ಇತ್ತೀಚಿನ ಕೆಲವು ಗಂಡುಮಕ್ಕಳಲ್ಲಿ ಮೀಸೆ ಗಡ್ಡಗಳೇ ಬೆಳೆಯದಿರಲು ಕಾರಣ?




ರೂಪದ ವಿಷಯದಲ್ಲಿ ನೈಸರ್ಗಿಕ ಸ್ತ್ರೀಪುರುಷ ಸಮಾನತೆ!

ಬಾ.ರಂ. ಸುರೇಶ್, ಶಿವಮೊಗ್ಗ

ಧೂಮಪಾನ, ಮದ್ಯಪಾನ ಆರೋಗ್ಯಕ್ಕೆ ಹಾನಿಕರವೆನ್ನುವ ಸರ್ಕಾರ ಅದಕ್ಕೆ ಅನುಮತಿ ನೀಡುವುದೇಕೆ?

ಅದು ಜನಸಂಖ್ಯಾ ನಿಯಂತ್ರಣಕ್ಕೆಂದು ಹಮ್ಮಿಕೊಂಡಿರುವ ಉಪಾಯ ಎನಿಸುತ್ತದೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಕಷ್ಟವು ಬಡವರಿಗಷ್ಟೇ ಇರುವುದೋ, ಶ್ರೀಮಂತರಿಗೂ ಇರುವುದೋ?

ಕೈಯೊಡ್ಡುವ ಬಡವರೇ ಶ್ರೀಮಂತರು ಎದುರಿಸುವ ದೊಡ್ಡ ಕಷ್ಟ.

ಎಂ. ಸುರೇಶ್, ನೆಟ್ಲ ಗದ್ದೇಬಯಲು

ನಿಜವಾದ ಪ್ರೇಯಸಿಯ ಲಕ್ಷಣ ಯಾವುದು?




ಅಸೂಯೆ ಇಲ್ಲದೆ ಪ್ರೀತಿಸಿದ ರಾಧೆಯ ರೀತಿಯದು.

ಎಂ.ಸಿ. ಧನ್ಯತಾ, ಬೆಂಗಳೂರು

ಗರ್ಭಿಣಿಯ ಬಯಕೆಗೂ, ರಾಜಕಾರಣಿಯ ಬಯಕೆಗೂ ಏನು ವ್ಯತ್ಯಾಸ?

ಅವಳದು ಮಣ್ಣು ಮುಕ್ಕುವ ಬಯಕೆ; ಇವರದು ಮಣ್ಣು ಮುಕ್ಕಿಸುವ ಬಯಕೆ.

ಹೆಚ್. ಮಂಜಪ್ಪ, ಭದ್ರಾವತಿ

ಖಾಸಗಿ ಸುದ್ದಿವಾಹಿನಿಗಳು ಚಿಕ್ಕ ಸುದ್ದಿಯನ್ನೂ ದೊಡ್ಡದಾಗಿ ಕಿರುಚಿ ಹೇಳುತ್ತಾರಲ್ಲಾ?

ಕತ್ತೆಗಳಿಗೆ ಪಿಸುಮಾತಾಡಲು ಬರುವುದಿಲ್ಲ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ರಾಜಕೀಯ ಎಂಬ ಬುಗುರಿಗೆ ಮತದಾನವೇ ಚಾಟಿ. ಫಲಿತಾಂಶ?

ಕೆಲವರಿಗೆ ಅಪೀಟು, ಕೆಲವರಿಗೆ ಗುನ್ನ.

ಮಹಾವೀರ ಕಾಸರ, ಶಿವಮೊಗ್ಗ

ವಿಜ್ಞಾನ ಮತ್ತು ತತ್ವಜ್ಞಾನಗಳಿಗೆ ಇರುವ ಸಂಬಂಧವೇನು?

ಕಾಣದಿರುವುದರ ಬೆನ್ನು ಹತ್ತುವ ಗುಣ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

ಜೀವನದ ಸ್ವಾರಸ್ಯ ಯಾವುದರಲ್ಲಿದೆ?

ದೃಷ್ಟಿಕೋನದಲ್ಲಿ. ಆಶಾವಾದಿಗೆ ಕಾರ್ಮೋಡದ ಸುತ್ತಲೂ ಬೆಳ್ಳಿಯ ರೇಖೆ ಕಾಣುತ್ತದೆ.

ವಿ. ಮಾಧವ ಶ್ಯಾನುಭಾಗ, ಕುಂದಾಪುರ

ಚಿತ್ತಾಪಹಾರಿಗಳಿಗಿಂತ ವಿತ್ತಾಪಹಾರಿಗಳೇ ಜಾಸ್ತಿಯಾಗಿದ್ದಾರಲ್ಲ, ಏಕೆ?

ತಲೆ ಓಡಿಸೋದಕ್ಕಿಂತ ತಲೆ ಬೋಳಿಸೋದೇ ಸುಲಭವಾದ್ದರಿಂದ.

ಸುರೇಶ ಎಂ. ಕಲ್ಲಡ್ಕ

ನೀರಿಗೆ ಕಣ್ಣಿಲ್ಲ ಎನ್ನುತ್ತಾರೆ. ಹೌದಾ ರಾಮ್?

ನಿಜ. ಕಣ್ಣಿದ್ದಿದ್ದರೆ 830 ಅಡಿ ಆಳವನ್ನು ನೋಡಿ ಜೋಗದ 'ರಾಜ' ಹಿಂದಕ್ಕೆ ಓಡಿಬಿಡುತ್ತಿತ್ತು.

ಸುಶೀಲ ಎಸ್. ಪಾಟೀಲ, ಸಂಕೇಶ್ವರ

ಹೆಚ್ಚುಹೆಚ್ಚಾಗಿ ಗಂಡಸರೇ ಸಾಯುತ್ತಾರೆ. ಏಕೆ?

ಸ್ವರ್ಗದಲ್ಲಿ ರಂಭೆ ಊರ್ವಶಿಯರನ್ನು ಕಾಣುವ ತವಕ!

ರತ್ನಜ, ಮೈಸೂರು

ಜನರ ಸೀರಿಯಲ್ ನೋಡುವ ಹುಚ್ಚನ್ನು ಬಿಡಿಸುವುದು ಹೇಗೆ?

ನೆಟ್‌ಫ್ಲಿಕ್ಸ್ ಹಾಕಿಕೊಡಿ; ಫಿಲ್ಮ್ ಹುಚ್ಚು ಹಿಡಿದು ಈ ಹುಚ್ಚು ಬಿಡುತ್ತದೆ.

ಪಿ.ಜೆ. ರಾಘವೇಂದ್ರ, ಮೈಸೂರು

ಪಾಲಿಕೆ ಬೀದಿನಾಯಿಯನ್ನು ಹಿಡಿಯುವುದಕ್ಕೂ, ಪೊಲೀಸರು ವಾಹನ ಸವಾರರನ್ನು ಹಿಡಿಯುವುದಕ್ಕೂ ವ್ಯತ್ಯಾಸ?

ನಾಯಿಯನ್ನು ಮೇಲೇರಿಸಿಕೊಳ್ಳುತ್ತಾರೆ. ಸವಾರರನ್ನು ಕೆಳಕ್ಕಿಳಿಸುತ್ತಾರೆ.

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಹೆಂಡತಿಗೆ ಚೆಲ್ಲಾಟ, ಗಂಡನಿಗೆ ಪ್ರಾಣಸಂಕಟ ಎಂಬ ಗಾದೆ ಯಾವಾಗ ಅನ್ವಯವಾಗುತ್ತದೆ?

ಆಫೀಸಿಗೆ ತುರ್ತಾಗಿ ಹೊರಟ ಪತಿಯ ಪ್ಯಾಂಟಿನ ಮೇಲೆ ಸತಿಯು ಏನನ್ನಾದರೂ ಚೆಲ್ಲಿದಾಗ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಚಲಾವಣೆ ಇಲ್ಲದವರೂ ಚುನಾವಣೆಯಿಂದ ಚಾಲ್ತಿಯಾಗುತ್ತಾರಲ್ಲ ರಾಮ್?

ರದ್ದಿ ಕಾಗದಕ್ಕೂ ಕೆಜಿ ಲೆಕ್ಕದಲ್ಲಿ ಬೆಲೆ ದೊರೆಯುತ್ತದೆ, ಇದೂ ಹಾಗೆಯೇ.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಇಂದು ಸತ್ಯ ಹರಿಶ್ಚಂದ್ರ ಎಷ್ಟು ಪ್ರಸ್ತುತ?

ಸತ್ಯಕ್ಕೇ ಆತುಕೊಂಡರೆ ಆಸ್ತಿಯೆಲ್ಲ ಹರಾಜಾಗುವುದು ನಿಶ್ಚಿತವೆಂದು ತೋರುವಷ್ಟು.

ಆರ್. ಮಧುಸೂದನ್, ಹಾಸನ

ಎಲ್ಲ ಸೊಳ್ಳೆಗಳೂ ಒಂದೇ ರಾಗದಲ್ಲಿ ಹಾಡುತ್ತವೆ. ಆ ರಾಗ ಯಾವುದು?




ಕರ್ಣತಾಡನ ಪ್ರಚೋದಿನಿ ರಾಗ.

ಬೂಕನಕೆರೆ ವಿಜೇಂದ್ರ, ಮೈಸೂರು

ಸರ್ಕಾರಿ ಕೆಲಸದಿಂದ ನಿವೃತ್ತರಾದ ಕೆಲವು ಹೆಂಗಸರು ನಿವೃತ್ತಿಯ ವಯಸ್ಸಾದಂತೆ ಕಾಣರಲ್ಲ?

ಅತ್ತೆ/ಸೊಸೆಯೊಡನೆ ಅತಿ ಕಡಿಮೆ ಕಾಲ ಕಳೆದದ್ದೇ ಅದಕ್ಕೆ ಕಾರಣವಂತೆ.

ವಿ. ಹೇಮಂತಕುಮಾರ್, ಬೆಂಗಳೂರು

ಹೆಂಡತಿಯನ್ನು ಖುಷಿಪಡಿಸುವಂತಹ ಯೋಗಾಸನ ಇದೆಯಾ?

ಗಂಡ ಹಾಕುವ ಪಾಕಶಾಲಾಸನ, ಗೃಹಸ್ವಚ್ಛಕರ್ಯಾಸನ, ಸತಿವಾಕ್ಯಪರಿಪಾಲನಾಸನ...

■ ರಾಮ್